ದಿನಾಂಕಃ **05.07.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿಯ ಪರ ಶ್ರೀ ಪಿ.ವಿ.ಪಿ. ವಕೀಲರಿಂದಃ

01. ಈ ದಾವೆಯನ್ನು ಯಾರು ಸಲ್ಲಿಸಿದ್ದಾರೆ, ಯಾರ ವಿರುದ್ಧ ಸಲ್ಲಿಸಿದ್ದಾರೆ ಮತ್ತು ಯಾವ ಪರಿಹಾರಕ್ಕಾಗಿ ಸಲ್ಲಿಸಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿದೆ. ನನಗೆ ಲಂಬಾಣಿ ಸಾನ್ಯಾನಾಯ್ಕ ನ ವಂಶಸ್ಥರ ಬಗ್ಗೆ ಮಾಹಿತಿ ಇದೆಯೇ? ಎಂದರೆ ಮಾಹಿತಿ ಇರುತ್ತದೆ. ವಾದಿಗಳು ಎಷ್ಟು ಆಸ್ತಿಗಳ ಬಗ್ಗೆ ಈ ದಾವೆ ಹಾಕಿದ್ದಾರೆಂದು ನನಗೆ ಗೊತ್ತಿಲ್ಲ. ನನ್ನ ತಕರಾರಿಗೆ ನಾನೇ ಮಾಹಿತಿ ಕೊಟ್ಟಿದ್ದೆ. ತಕರಾರು ಹಾಕುವ ಕಾಲಕ್ಕೆ ಎಷ್ಟು ಆಸ್ತಿಗಳ ಬಗ್ಗೆ ದಾವೆ ಹಾಕಿದ್ದಾರೆಂದು ತಿಳಿದುಕೊಳ್ಳಲಿಲ್ಲವೇ? ಎಂದರೆ ಇಲ್ಲ, 26 ಎಕರೆ ಬಗ್ಗೆ ಮಾತ್ರ ತಿಳಿದುಕೊಂಡಿದ್ದೇನೆ . ನನ್ನದೂ ಕೂಡಾ ಕುಮಾರನಹಳ್ಳಿತಾಂಡಾ ಎಂದರೆ ಸರಿ. ನಾನೂ ಕೂಡಾ ವಾದಿಗಳು ಮತ್ತು ಪ್ರತಿವಾದಿಗಳು ವಾಸ ಮಾಡುವ ಗ್ರಾಮದಲ್ಲೇ ವಾಸ ಮಾಡುವುದರಿಂದ ಮೂಲತಃ ದಾವಾ ಸ್ವತ್ತುಗಳು ಯಾರಿಗೆ ಸೇರಿದ್ದವು ಎಂಬ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ. ಆದ್ದರಿಂದ ಇದು ಲಂಬಾಣಿ ಸಾನ್ಯಾನಾಯ್ಕನ ಆಸ್ತಿ ಎಂದು ನನಗೆ ಗೊತ್ತಿದೆ ಎಂದರೆ ಸರಿ. ಸರ್ವೇ ನಂ.267 ರ ಒಟ್ಟು ವಿಸ್ತೀರ್ಣ 26 ಎಕರೆ 62 ಸೆಂಟ್ಸ್ ಇರುತ್ತದೆ ಎಂದರೆ ಸರಿ. ಅದರಲ್ಲಿ 4 ಎಕರೆಯನ್ನು ನಾನು ಯಾರಿಂದ ಖರೀದಿ ಮಾಡಿದ್ದೆ? ಎಂದರೆ ಪ್ರತಿವಾದಿಗಳಲ್ಲಿ ಲಕ್ಷ್ಮಿಬಾಯಿ, ಮಲ್ಲೇಶ್ ನಾಯ್ಕ, ಹರಿಶ್ಚಂದ್ರ ನಾಯ್ಕ ಮತ್ತು ಸಾವಿತ್ರಿಬಾಯಿ ಇವರ ಕಡೆಯಿಂದ ಖರೀದಿ ಮಾಡಿದ್ದೆ. ನನಗೆ ಮಾರಾಟ ಮಾಡಿದ ಸದರಿ ಪ್ರತಿವಾದಿಗಳು ನನಗೆ ಯಾವ ರೀತಿ ಸಂಬಂಧಿಕರು? ಎಂದರೆ ಅವರು ನನಗೆ ಮಾವಂದಿರು ಮತ್ತು ಅತ್ತೆಯರು ಆಗಬೇಕು. 1 ನೇ ಪ್ರತಿವಾದಿ ಪಾಂಡು ನಾಯ್ಕ ನನ್ನ ಗಂಡನ ತಂದೆ ಎಂದರೆ ಸರಿ. ಪ್ರತಿವಾದಿ ನಂ. 1(ಜಿ) ವಿಷ್ಣು ನಾಯ್ಕ ನನ್ನ ಗಂಡನೆಂದರೆ ಸರಿ. ನಾನು ಖರೀದಿ ಮಾಡುವ ಮುಂಚೆ ನನ್ನ ಗಂಡ, ನನ್ನ ಮಾವ ಮತ್ತು ನನಗೆ ಮಾರಾಟ ಮಾಡಿದ ಪ್ರತಿವಾದಿಗಳನ್ನು ಈ ದಾವೆ ಬಗ್ಗೆ ವಿಚಾರಣೆ ಮಾಡಲಿಲ್ಲವೇ? ಎಂದರೆ ನನಗೆ ಅವಶ್ಯಕ ಪಕ್ಷಕಾರಳಾಗಿ ಮಾಡುವಂತೆ ಕಳುಹಿಸಿದ ನೋಟೀಸ್ ಬರುವವರೆಗೆ ಈ ದಾವೆ ಬಗ್ಗೆ ಮಾಹಿತಿ ಇರಲಿಲ್ಲ. ನನಗೆ ಮೇಲ್ಕಂಡ ಎಲ್ಲರೂ ಬಂದು ಕ್ರಯ ಪತ್ರ ನೋಂದಣಿ ಮಾಡಿಸಿಕೊಟ್ಟಿದ್ದರೇ? ಎಂದರೆ ಹೌದು. ಕ್ರಯ ಪತ್ರ ರಿಜಿಸ್ಟರ್ ಮಾಡಿಸಿಕೊಡುವಾಗ ಈ ದಾವೆಯ ಬಗ್ಗೆ ತಿಳಿಸಿದ್ದರೇ? ಎಂದರೆ ರಿಜಿಸ್ಟರ್ ಆಗುವಾಗ ಈ ದಾವೆ ಚಾಲ್ತಿಯಲ್ಲಿರಲಿಲ್ಲ. ದಾವೆ ಚಾಲ್ತಿಯಲ್ಲಿದ್ದರೂ ನಾನು ಕ್ರಯ ಪತ್ರ ಮಾಡಿಕೊಂಡು ಆ ವಿಚಾರ ಮುಚ್ಚಿಟ್ಟು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಕ್ರಯ ಮಾಡಿದ ಯಾವುದೇ ಪ್ರತಿವಾದಿಗಳು ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ . ನನಗೆ ನೋಟೀಸ್ ಬಂದ ನಂತರ ಮಾರಾಟ ಮಾಡಿದ ಪ್ರತಿವಾದಿಗಳನ್ನು ದಾವೆಯಲ್ಲಿ ಅವರು ಏನು ತಕರಾರು ಸಲ್ಲಿಸಿದ್ದಾರೆಂದು ನಾನು ಕೇಳಲಿಲ್ಲವೇ? ಎಂದರೆ ಇಲ್ಲ. ಐಟಂ ನಂ.2 ರ ಆಸ್ತಿ ವಾದಿಗಳು ಮತ್ತು 1 ರಿಂದ 22 ನೇ ಪ್ರತಿವಾದಿಗಳ ಕೂಡು ಕುಟುಂಬದ ಆಸ್ತಿ ಎಂದರೆ ಇರಬಹುದು, ನನಗೆ

ಗೊತ್ತಿಲ್ಲ. ಜಮೀನು ಖರೀದಿಸಿ ಗಂಗಾಕಲ್ಯಾಣ ಯೋಜನೆಯಲ್ಲಿ ಬೋರವೆಲ್ ಹಾಕಿಸಿದ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ಪಾಲುವಿಭಾಗ ಕೊಡುವುದನ್ನು ತಪ್ಪಿಸಲಿಕ್ಕಾಗಿ ನಾನು ಮತ್ತು ನನಗೆ ಕ್ರಯ ಮಾಡಿದ ಪ್ರತಿವಾದಿಗಳು ಸೇರಿ ಸುಳ್ಳು ಕ್ರಯ ಪತ್ರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಕ್ರಯ ಪತ್ರದ ಪ್ರಕಾರ ನಾನು 4 ಎಕರೆ ಜಮೀನಿನಲ್ಲಿ ಸ್ವಾಧೀನ ಹೊಂದಿಲ್ಲ ಎಂದರೆ ಸರಿಯಲ್ಲ. ದಾವಾ ಚಾಲ್ತಿಯಲ್ಲಿರುವಾಗ ಅದನ್ನು ಮರೆಮಾಚಿ ಬರೆದುಕೊಟ್ಟ ಕ್ರಯ ಪತ್ರವು ವಾದಿಗಳ ಹಕ್ಕಿಗೆ ಬಂಧಕವಾಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬಗ್ಗೆ ಯಾವುದೇ ಮಾಹಿತಿ ಇರದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.